ಎಸಿಪಿ ಶಿವಣ್ಣ ಗೃಹ ಕಾರ್ಯದರ್ಶಿಯವರ ಮನೆ ಪ್ರವೇಶಿಸಿದ. ಬೆಟ್ಟದಂತಹ ಕೇಸ್ ಒಂದೇ ದಿನದಲ್ಲಿ ಮುಗಿದಿತ್ತು. ಅವನನ್ನೇ ಫಾಲೋ ಮಾಡುತ್ತಿದ್ದ ಕೆಲವು ಪತ್ರಕರ್ತರು ಹಿಂದೆಯೇ ಒಳನುಗ್ಗಲು ಪ್ರಯತ್ನಿಸಿ ಸೋತರು.

ಜಗದೀಶಚಂದ್ರ ಅವರನ್ನು ಕಂಡೊಡನೇ ಸೆಲ್ಯೂಟ್ ಮಾಡಿ, "ಸರ್ ಆರೋಪಿ ಸಿಕ್ಕಿ ಬಿದ್ದ. ಇಲ್ಲೇ ಸುಮಾರು ಎಪ್ಪತ್ತು ಕಿ.ಮೀ. ದೂರದಲ್ಲಿರುವ ಸೋಮೇನ ಹಳ್ಳಿಯ ಐಬಿಯಲ್ಲಿ ಅಡಗಿದ್ದ. ಡ್ರೈವರ್ ಹಾಗೂ ಐಬಿಯ ಮೇಟಿ ಇಬ್ಬರನ್ನೂ ಅರೆಸ್ಟ್ ಮಾಡಿದ್ದೇವೆ. ವಿಚಾರಣೆ ಮಾಡಿ ಎಫ್ಐಆರ್ ಹಾಕುವುದಷ್ಟೇ ಬಾಕಿ.'' ಅದ್ಯಾವುದನ್ನೂ ಕೇಳಿಸಿಕೊಳ್ಳುವ ಮೂಡ್‌ನಲ್ಲಿ ಜಗದೀಶಚಂದ್ರ ಇರಲಿಲ್ಲ. "ಏನೇನು ಸಿಕ್ಕಿತು ಅವನ ಬಳಿ?'' ಎಂದು ಪ್ರಶ್ನಿಸಿದರು.

"ಸರ್, ಎರಡು ಸಿಡಿ ಸಿಕ್ಕಿದೆ ಹಾಗೂ ಸುಮಾರು ಐದು ಸಾವಿರದ ಆರು ನೂರು ರೂಪಾಯಿ ಹಾಗೂ ಎರಡು ಮೊಬೈಲ್‌ಗಳು ಸಿಕ್ಕಿವೆ. ಎಲ್ಲ ಫೊರೆನ್ಸಿಕ್‌ಗೆ ಕಳುಹಿಸಲು ವ್ಯವಸ್ಥೆ ಮಾಡಿದ್ದೇನೆ, ಸರ್..." ಅತ್ಯುತ್ಸಾಹದಿಂದ ನುಡಿದ ಎಸಿಪಿ ಶಿವಣ್ಣ.

"ನೋಡ್ರೀ, ಆಗಲೇ ಇದು ರಾಜಕೀಯವಾಗಿ ಎತ್ತಲೋ ತಿರುಗುತ್ತಿದೆ. ಹಾಗಾಗಿ ನಾನು ಹೇಳಿದ ಹಾಗೆ ಮಾಡಿ..." ಶಿವಣ್ಣನನ್ನು ಅರ್ಧದಲ್ಲಿಯೇ ತಡೆಯುತ್ತಾ ಅಂದರು: "ಅವನು ಬಾಯಿ ಬಿಟ್ಟಿದ್ದು ಯಾರಿಗೂ ತಿಳಿಯಬಾರದು. ಕಂಪ್ಲೇಂಟ್ ಪ್ರಕಾರ ಈ ಕೇಸ್ ಕ್ರಿಮಿನಲ್ ಕೇಸ್ ಆಗುತ್ತದೆ. ಹಾಗೆ ಮಾಡುವುದು ಬೇಡ. ಬಡವಾ ಬದುಕಿಕೊಳ್ಳಲಿ. ಸಿವಿಲ್ ಕೇಸ್ ಆಗುವಂತೆ ಎಫ್ಐಆರ್‌ನಲ್ಲಿ ಸೆಕ್ಷನ್‌ಗಳನ್ನು ಹಾಕಿ.''

ಅವರ ಮಾತುಗಳನ್ನು ಕೇಳಿ ಆಶ್ಚರ್ಯಚಕಿತನಾದ ಶಿವಣ್ಣ ಅಂದ: "ಸರ್... ಇದನ್ನು ಸೈಬರ್ ಕ್ರೈಮ್‌ನ ಅಡಿಯಲ್ಲಿ ಹಾಕೋಣ ಸರ್... ಕನಿಷ್ಠ ಅಂದರೂ ಅವನನ್ನು ಏಳು ವರ್ಷ ಒಳಗೆ ಹಾಕಬಹುದು..."

ಅವನ ಮಾತುಗಳನ್ನು ತಡೆಯುತ್ತ, "ಹೇಳಿದಷ್ಟು ಮಾಡ್ರೀ... ಹಾಂ ಅವನನ್ನು ಠಾಣೆಗೆ ಕರೆದೊಯ್ಯುವ ಮೊದಲು ಇಲ್ಲಿಗೆ ಕರೆ ತನ್ನಿ. ನಾನು ಮಾತಾಡ್ತೀನಿ ಮೊದಲು. ಮೀಡಿಯಾದವರಿಗೆ ಅವನ ಬಳಿ ಐದು ಸಾವಿರ ಅಲ್ಲ, ಐದು ಲಕ್ಷ ಇತ್ತು ಹಾಗೂ ಸುಮಾರು ಹತ್ತು ಮೊಬೈಲ್‌ಗಳು ಇದ್ದವು ಎಂದು ಹೇಳಿ.''

"ಸ್ವಲ್ಪ ಹೊತ್ತಿಗೆ ನಾನು ನನ್ನ ರಾಜೀನಾಮೆ ಕೊಡುತ್ತಿದ್ದೇನೆ. ಪ್ರೆಸ್‌ನವರು ಮತ್ತೆ ಬರುತ್ತಿದ್ದಾರೆ. ಅವರೆಲ್ಲರಿಗೆ ನಾನು ಹೇಳಿದಂತೆ ಹೇಳಿ. ಅವರು ಹೋದ ಮೇಲೆ ಆ ಮುಠ್ಠಾಳ ಡ್ರೈವರ್ ಅನ್ನು ಕರೆತನ್ನಿ..." ಅಲ್ಲಿಯ ತನಕ ನಿಧಾನವಾಗಿ ಮಾತನಾಡುತ್ತಿದ ಜಗದೀಶಚಂದ್ರ ಅವರ ಧ್ವನಿ ಗಡುಸಾಗಿತ್ತು; ಕೋರಿಕೆ ಹೋಗಿ ಆದೇಶ ಇತ್ತು.

ಶಿವಣ್ಣ ಗೊಂದಲಕ್ಕೀಡಾದ.

'ಸರಿಯಾಗಿ ಫಿಟ್ ಆದ ಕ್ರಿಮಿನಲ್ ಕೇಸ್ ಅನ್ನು ಯಾಕೆ ಇವರು ತಾವಾಗಿಯೇ ಸಿವಿಲ್ ಮೊಕದ್ದಮೆಯನ್ನಾಗಿ ಮಾಡುತ್ತಿದ್ದಾರೆ? ತಮ್ಮ ವ್ಯಕ್ತಿತ್ವಕ್ಕೆ ಮಸಿ ಬಳಿಯಲು ಪ್ರಯತ್ನಿಸಿದವನ ವಿರುದ್ಧ ಯಾಕೆ ದುರ್ಬಲವಾದ ಪ್ರಕರಣ ದಾಖಲಿಸುತ್ತಾರೆ?'

ದೊಡ್ಡವರ ರಹಸ್ಯಗಳು ಆದಷ್ಟೂ ರಹಸ್ಯವಾಗಿಯೇ ಇರಬೇಕು. ಇಲ್ಲದಿದ್ದರೆ ಜನರಿಗೆ ಪೊಲೀಸರ ಮೇಲೆ ಗೌರವ ಹೋಗುತ್ತದೆ. ಇದು ಇಲಾಖೆಯ ಅಲಿಖಿತ ನಿಯಮ. ಅದು ಸರಿಯೋ ತಪ್ಪೋ ಎನ್ನುವುದಲ್ಲ; ಆದೇಶ ಯಾವತ್ತಿಗೂ ಆದೇಶವೇ. ಎದುರು ವಾದಿಸಲಾಗದು. ಅದಲ್ಲದೇ ಗೃಹ ಕಾರ್ಯದರ್ಶಿ ರಾಜೀನಾಮೆ ಯಾಕೆ ಕೊಡಬೇಕು? ಇದು ಖಾಸಗಿ ದೂರು ಎಂದು ಮುಚ್ಚಿ